**ಶ್ರೀ ಕೆ ಟಿ ಶ್ರೀಕಂಠೇಗೌಡ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಇವರು ನಿಯಮ 330-ಎ ರಡಿ ಮಂಡಿಸಿರುವ ಸೂಚನಾ ಪತ್ರಕ್ಕೆ ಸರ್ಕಾರದ ಉತ್ತರ**

**ಪ್ರಶ್ನೆ**

**ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗಾಗಿ ನಡೆದ ನೇಮಕಾತಿ ಪರೀಕ್ಷೆಗಾಗಿ ಸಿದ್ಧಪಡಿಸಿದ ಕೀ ಉತ್ತರಗಳಲ್ಲಿ ತಪ್ಪುಗಳು ಬಂದಿರುವ ಬಗ್ಗೆ-**

**ಉತ್ತರ**

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರ ಹುದ್ದೆಗಳಿಗೆ ದಿನಾಂಕ:29-11-2018 ರಿಂದ 08-12-2018ರ ವರೆಗೆ ಒಟ್ಟು 8 ಜಿಲ್ಲೆಗಳಲ್ಲಿ 20 ವಿಷಯಗಳಿಗೆ ಪತ್ರಿಕೆ-1 ಮತ್ತು ಪತ್ರಿಕೆ-2 ಕ್ಕೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ಯಾವುದೇ ಲೋಪದೋಷಗಳಿಲ್ಲದೆ ಅತ್ಯಂತ ಪಾರದರ್ಶಕತೆಯಿಂದ ನಡೆಸಲಾಯಿತು.

ಸ್ಪರ್ಧಾತ್ಮಕ ಪರೀಕ್ಷೆಯ ಎಲ್ಲಾ ವಿಷಯಗಳ ತಾತ್ಕಾಲಿಕ ಕೀ ಉತ್ತರಗಳನ್ನು ದಿನಾಂಕ:14-01-2019 ರಂದು ಪ್ರಕಟಿಸಿ ಕೀ ಉತ್ತರಗಳ ಬಗ್ಗೆ ಅಭ್ಯರ್ಥಿಗಳಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು. ಅಭ್ಯರ್ಥಿಗಳಿಂದ ಸ್ವೀಕರಿಸಲಾದ ಆಕ್ಷೇಪಣೆಗಳನ್ನು ಆಯಾ ವಿಷಯದ ತಜ್ಞರ ಸಮಿತಿಯ ಮೂಲಕ ಪರಿಶೀಲಿಸಲಾಗಿದ್ದು, ತಜ್ಞರ ಸಮಿತಿಯು ನೀಡಿರುವ ವರದಿಯನ್ನು ಅಳವಡಿಸಿಕೊಂಡು ಪರಿಷ್ಕೃತ ಕೀ ಉತ್ತರಗಳನ್ನು ದಿನಾಂಕ:20.03.2019 ರಂದು ಪ್ರಕಟಿಸಲಾಗಿತ್ತು. ಪರಿಷ್ಕೃತ ಕೀ ಉತ್ತರಗಳನ್ನು ಪ್ರಕಟಿಸಿದ ನಂತರವೂ ಕೆಲವು ಅಭ್ಯರ್ಥಿಗಳು ರಾಜ್ಯಶಾಸ್ತ್ರ, ಕನ್ನಡ, ಸಮಾಜಶಾಸ್ತ್ರ ಮತ್ತು ಇತಿಹಾಸ ವಿಷಯಗಳ ಪರಿಷ್ಕೃತ ಕೀ ಉತ್ತರಗಳ ಬಗ್ಗೆಯು ಸಹ ಆಕ್ಷೇಪಣೆ ಸಲ್ಲಿಸಿದ್ದರಿಂದ ಪ್ರಾಧಿಕಾರವು ಅಭ್ಯರ್ಥಿಗಳಿಗೆ ನ್ಯಾಯ ದೊರಕಿಸುವ ದೃಷ್ಟಿಯಿಂದ ಹಾಗೂ ಯಾವುದೇ ಅಭ್ಯರ್ಥಿಗೆ ಅನ್ಯಾಯವಾಗಬಾರದೆಂದು ಪರಿಗಣಿಸಿ ಮತ್ತೊಮ್ಮೆ ಸದರಿ ವಿಷಯಗಳ ತಜ್ಞರ ಮತ್ತೊಂದು ಸಮಿತಿಯ ಮುಂದೆ ಅಭ್ಯರ್ಥಿಗಳಿಂದ ಸ್ವೀಕರಿಸಲಾದ ಆಕ್ಷೇಪಣೆಗಳನ್ನು ಪರಿಶೀಲನೆಗೆ ಒಳಪಡಿಸಲಾಯಿತು.

ಮೇಲ್ಕಂಡ ವಿಷಯ ತಜ್ಞರ ಸಮಿತಿಯು ನೀಡಿದ ವರದಿಯಂತೆ ಪರಿಷ್ಕೃತ ಕೀ ಉತ್ತರಗಳನ್ನು ಅಳವಡಿಸಿಕೊಂಡು ಎಲ್ಲಾ ವಿಷಯಗಳ ಮೆರಿಟ್ ಪಟ್ಟಿಯನ್ನು ದಿನಾಂಕ:04-05-2019 ರಂದು ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಾಧಿಕಾರದ ಅಂತರ್ಜಾಲದಲ್ಲಿ ಪ್ರಕಟಿಸಲಾಗಿತ್ತು. ಇದರ ಜೊತೆಯಲ್ಲಿ ಅಂತಿಮ ಕೀ ಉತ್ತರಗಳನ್ನು ಸಹ ಪ್ರಕಟಿಸಲಾಗಿತ್ತು.

ನಂತರ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲಿಸಿ, ಅಭ್ಯರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳು ಮತ್ತು ಕೋರಿರುವ ಮೀಸಲಾತಿಯನ್ನು ಆಧರಿಸಿ ಪ್ರಸ್ತುತ ನೇಮಕಾತಿ ನಿಯಮಗಳು ಮತ್ತು ಸರ್ಕಾರದ ಸುತ್ತೋಲೆ ದಿನಾಂಕ:16.11.2016ರ ಪ್ರಕಾರ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಿ, ದಿನಾಂಕ:26.08.2019 ರಂದು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಅಭ್ಯರ್ಥಿಗಳಿಂದ ಆಕ್ಷೇಪಣೆಗಳಿದ್ದಲ್ಲಿ ದಿನಾಂಕ:06-09-2019ರೊಳಗೆ ಪ್ರಾಧಿಕಾರಕ್ಕೆ ಸಲ್ಲಿಸುವಂತೆ ತಿಳಿಸಲಾಗಿತ್ತು.

ಪುಟ 2ಕ್ಕೆ

ದಿನಾಂಕ:26.08.2019 ರಂದು ಪ್ರಕಟಿಸಿದ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಒಟ್ಟು 91 ಆಕ್ಷೇಪಣೆಗಳನ್ನು ಸ್ವೀಕೃತವಾಗಿದ್ದು, ಎಲ್ಲಾ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಲಾಗಿದ್ದು, ಅಂತಿಮ ಆಯ್ಕೆ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸಿದ್ಧಪಡಿಸಲಾಗಿರುತ್ತದೆ.

ಹಲವು ಮಾಧ್ಯಮಗಳಲ್ಲಿ ನೇಮಕಾತಿ ಪ್ರಕ್ರಿಯೆ ಕುರಿತಂತೆ ಆಕ್ಷೇಪಣೆಗಳು ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ಇದನ್ನು ಸಮಗ್ರವಾಗಿ ಪರಾಮರ್ಶಿಸಿ ವರದಿ ನೀಡುವಂತೆ ಶ್ರೀ ಬಿ ಎ ಹರೀಶ್‌ಗೌಡ, ಐಎಎಸ್(ನಿವೃತ್ತ) ಹಾಗೂ ಹಿಂದಿನ ವಿಶೇಷಾಧಿಕಾರಿ ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಇವರನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 168 ಡಿಟಿಇ 2019, ದಿನಾಂಕ:03/10/2019 ರಂದು ನೇಮಿಸಲಾಗಿತ್ತು.

ಅದರಂತೆ, ಶ್ರೀ ಬಿ ಎ ಹರಿ ೀಶ್‌ಗೌಡ, ಐಎಎಸ್ (ನಿವೃತ್ತ) ಇವರು ದಿನಾಂಕ:10/10/2019 ರಂದು ಸರ್ಕಾರಕ್ಕೆ ವರದಿಯನ್ನು ನೀಡಿದ್ದು, ಸದರಿ ವರದಿಯಲ್ಲಿ ವಿವರಿಸಿರುವ ವಾಸ್ತವಾಂಶಗಳ ಆಧಾರದ ಮೇಲೆ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳುವುದು ಸೂಕ್ತವಾಗಿರುತ್ತದೆಂದು ತಿಳಿಸಿರುತ್ತಾರೆ.

(a) ತಾತ್ಕಾಲಿಕ ಫಲಿತಾಂಶ ಪ್ರಕಟಿಸಿದ ನಂತರ ಆಕ್ಷೇಪಣೆಗಳು ಬರದೇ ಇರುವಂತಹ ಹಾಗೂ ಬಂದ ಆಕ್ಷೇಪಣೆಗಳ ಬಗ್ಗೆ ಎರಡನೇ ತಜ್ಞರ ಸಮಿತಿಯು ಸರಿಯಾದ ಪರಿಹಾರ ಕ್ರಮ ತೆಗೆದುಕೊಂಡಂತಹ ವಿಷಯಗಳಾದ;

| | | |
|---|---|---|
| (1) ಭೌತಶಾಸ್ತ್ರ ಪತ್ರಿಕೆ-1 | (2)ಭೌತಶಾಸ್ತ್ರ ಪತ್ರಿಕೆ-2 | (3) ರಾಸಾಯನಶಾಸ್ತ್ರ ಪತ್ರಿಕೆ-1 |
| (4) ರಾಸಾಯನಶಾಸ್ತ್ರ ಪತ್ರಿಕೆ-2 | (5)ಗಣಿತ ಶಾಸ್ತ್ರ ಪತ್ರಿಕೆ-1 | (6) ಗಣಿತ ಶಾಸ್ತ್ರ ಪತ್ರಿಕೆ-2 |
| (7) ರಾಜ್ಯಶಾಸ್ತ್ರ ಪತ್ರಿಕೆ-1 | (8) ಸಮಾಜ ಶಾಸ್ತ್ರ ಪತ್ರಿಕೆ-1 | (9)ಸಮಾಜ ಶಾಸ್ತ್ರ ಪತ್ರಿಕೆ-2 |
| (10) ಶಿಕ್ಷಣ ಪತ್ರಿಕೆ-1 | (11) ಶಿಕ್ಷಣ ಪತ್ರಿಕೆ-2 | (12) ಭೂಗೋಳಶಾಸ್ತ್ರ ಪತ್ರಿಕೆ-1 |
| (13) ಭೂಗೋಳಶಾಸ್ತ್ರ ಪತ್ರಿಕೆ-2 | (14) ಕನ್ನಡ ಪತ್ರಿಕೆ-1 | (15) ಕನ್ನಡ ಪತ್ರಿಕೆ-2 |
| (16) ಇಂಗ್ಲೀಷ್ ಪತ್ರಿಕೆ-1 | (17) ಇಂಗ್ಲೀಷ್ ಪತ್ರಿಕೆ-2 | (18) ಹಿಂದಿ ಪತ್ರಿಕೆ-1 |
| (19) ಹಿಂದಿ ಪತ್ರಿಕೆ-2 | (20) ಸಂಸ್ಕೃತ ಪತ್ರಿಕೆ-1 | (21) ಸಂಸ್ಕೃತ ಪತ್ರಿಕೆ-2 |
| (22) ಉರ್ದು ಪತ್ರಿಕೆ-1 | (23) ಉರ್ದು ಪತ್ರಿಕೆ-2 | |

-ಗಳ ಫಲಿತಾಂಶಗಳನ್ನು ಪ್ರಕಟಿಸಿ, ಎರಡೂ ಪತ್ರಿಕೆಗಳ ಫಲಿತಾಂಶ ಪ್ರಕಟವಾದಲ್ಲಿ ನೇಮಕಾತಿ ಆದೇಶ ನೀಡುವುದು.

(b) ಗಣಿತಶಾಸ್ತ್ರ (ಪತ್ರಿಕೆ-1) ರ ಪ್ರಶ್ನೆ 66ಕ್ಕೆ ಎಲ್ಲಾ ಅಭ್ಯರ್ಥಿಗಳಿಗೂ ಪರಿಹಾರ ಅಂಕ ನೀಡಿ;

ಇತಿಹಾಸ (ಪತ್ರಿಕೆ-2) ರ ಪ್ರಶ್ನೆ 44 ಕ್ಕೆ ಸರಿ ಉತ್ತರ ಆಯ್ಕೆ (B) ಮತ್ತು (D) ಗಳಿಗೆ ಅಂಕ ನೀಡಿ;

ಪುಟ 3ಕ್ಕೆ

ಕನ್ನಡ (ಪತ್ರಿಕೆ-2) ರ; ಪ್ರಶ್ನೆ 38ಕ್ಕೆ ಸರಿ ಉತ್ತರ ಆಯ್ಕೆ (C) ಗೆ ಮಾತ್ರ ಅಂಕ ನೀಡಿ, ಪ್ರಶ್ನೆ 33ಕ್ಕೆ ಸರಿ ಉತ್ತರ ಆಯ್ಕೆ (A) ಗೆ ಅಂಕ ನೀಡಿ, ಪ್ರಶ್ನೆ 8ರ ಬಗ್ಗೆ ಎಲ್ಲಾ ಅಭ್ಯರ್ಥಿಗಳಿಗೆ ಪರಿಹಾರ ಅಂಕ ನೀಡಿ; ಮತ್ತು ಪ್ರಶ್ನೆ 41ರ ಸರಿ ಉತ್ತರ ಆಯ್ಕೆ (D) ಗೆ ಮಾತ್ರ ಅಂಕ ನೀಡಿ;

ಫಲಿತಾಂಶಗಳನ್ನು ಪ್ರಕಟಿಸಿ, ಎರಡೂ ಪತ್ರಿಕೆಗಳ ಫಲಿತಾಂಶ ಪ್ರಕಟವಾದಲ್ಲಿ ನೇಮಕಾತಿ ಆದೇಶ ನೀಡುವುದು.

(c) ರಾಜ್ಯಶಾಸ್ತ್ರ-2 ರಲ್ಲಿ ಮರು ಪರೀಕ್ಷೆ ಮಾಡುವುದು; ಹಾಗೂ

(d) ಇತಿಹಾಸ ಪತ್ರಿಕೆ-1 ರಲ್ಲಿ ಹೊಸ ತಜ್ಞರ ಸಮಿತಿಯಿಂದ ಪರಿಶೀಲನೆ ಮಾಡಿಸುವುದು ಸಹ ಸೂಕ್ತವಾಗಿರುತ್ತದೆ ಎಂದು ವರದಿ ಮಾಡಿರುತ್ತಾರೆ.

ಇದನ್ನು ಪರಿಗಣಿಸಿ ಕೂಡಲೇ ಈ ಎರಡು ವಿಷಯಗಳ ಫಲಿತಾಂಶವನ್ನು ತಡೆಹಿಡಿದು ಉಳಿದ ವಿಷಯಗಳ ನೇಮಕಾತಿ ಪಟ್ಟಿಯ ಪ್ರಕಟಣೆಗೆ ಸೂಚನೆ ನೀಡಲಾಗಿದೆ.

ಇಡಿ 172 ಡಿಜಿಡಬ್ಲ್ಯು 2019.

**(ಎಸ್.ಸುರೇಶ್ ಕುಮಾರ್)**
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಸಕಾಲ
ಹಾಗೂ ಕಾರ್ಮಿಕ ಸಚಿವರು